# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2023-24ನೇ ಸಾಲಿನ ಚಾಲೆಂಜ್ ಫಂಡ್ ಯೋಜನೆಯಡಿ ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳನ್ನು ಸರ್ಕಾರದ ಇಲಾಖೆಗಳು ಹಾಗೂ ಸಂಸ್ಥೆಗಳಲ್ಲಿ ಜಾರಿಗೆ ತರುವ ಸಲುವಾಗಿ ಸರ್ಕಾರದ ಅಧಿಕಾರಿ/ಸಿಬ್ಬಂದಿ/ಸರ್ಕಾರದ ಅಧಿಕಾರಿಗಳು/ಸಿಬ್ಬಂದಿಗಳ ಗುಂಪು ಮತ್ತು ಸರ್ಕಾರದ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 92 ಇಆಸು 2009, ದಿನಾಂಕ:08-07-2010.
2. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ(ಆಸು) 54 ಇಆಸು 2020, ದಿನಾಂಕ:02-03-2021.
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ(ಆಸು) 92 ಇಆಸು 2022, ದಿನಾಂಕ:20-10-2022.
4. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಡತ ಸಂಖ್ಯೆ:KPRC-MISC/332/2023-KPRC-DD8-KPRC
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ ರವರ ಪತ್ರ ಸಂಖ್ಯೆ:ಉಕಾ2:ಡಿ2:ಚಾಲೆಂಜ್ ಫಂಡ್-2023-24, ದಿನಾಂಕ:28-08-2023.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ ರವರ ಪತ್ರ ಸಂಖ್ಯೆ:ಉಕಾ2:ಡಿ2:ಚಾಲೆಂಜ್ ಫಂಡ್-2023-24, ದಿನಾಂಕ:28-08-2023.
7. ಕೃಷಿ ಇಲಾಖೆಯ ಅ.ಸ.ಪತ್ರ ಸಂಖ್ಯೆ:ಕೃಇ/ಸಕಾ/149/2023, ದಿನಾಂಕ:20-09-2023.
8. ದಿನಾಂಕ:18-12-2023 ರಂದು ಸರ್ಕಾರದ ಕಾರ್ಯದರ್ಶಿ, ಸಿಆಸುಇ(ಆಸು) ರವರ ಅಧ್ಯಕ್ಷತೆಯಲ್ಲಿ ಚಾಲೆಂಜ್ ಫಂಡ್ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲು ನಡೆದ ಆಯ್ಕೆ ಸಮಿತಿ ಸಭೆಯ ನಡವಳಿಗಳು.

**ಪ್ರಸ್ತಾವನೆ:**

ಮೇಲೆ ಓದಲಾದ(1)ರಲ್ಲಿರುವ ಸರ್ಕಾರದ ಆದೇಶದಲ್ಲಿ, ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳನ್ನು ಸರ್ಕಾರದ ಇಲಾಖೆಗಳು ಹಾಗೂ ಸಂಸ್ಥೆಗಳಲ್ಲಿ ಜಾರಿಗೆ ತರುವ ಸಲುವಾಗಿ ಸರ್ಕಾರದ ಅಧಿಕಾರಿ/ಸಿಬ್ಬಂದಿ/ ಸರ್ಕಾರದ ಅಧಿಕಾರಿಗಳು/ ಸಿಬ್ಬಂದಿಗಳ ಗುಂಪು ಮತ್ತು ಸರ್ಕಾರದ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವ ಸಲುವಾಗಿ ಚಾಲೆಂಜ್ ಫಂಡ್ ಯೋಜನೆಯನ್ನು ಸ್ಥಾಪಿಸಲಾಗಿದೆ. ಈ ಯೋಜನೆಯಲ್ಲಿ ಗುಣಮಟ್ಟದ ಗುರಿಗಳನ್ನು ಸಾಧಿಸಲು ಪ್ರಯೋಗಾತ್ಮಕ/ ವಿನೂತನ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಅನುದಾನವನ್ನು ಬಿಡುಗಡೆ ಮಾಡಲು ಉದ್ದೇಶಿಸಿ, ಪ್ರತಿ ವರ್ಷದ ಆಯವ್ಯಯದಲ್ಲಿ ಬೇಡಿಕೆಗನುಗುಣವಾಗಿ ಒಂದು ಮೊತ್ತದ ಅನುದಾನವನ್ನು ಹಂಚಿಕೆ ಮಾಡುವ ಕ್ರಮವಿರುತ್ತದೆ. ಈ ಯೋಜನೆಗೆ ಸರ್ಕಾರವು 2023-24ನೇ ಸಾಲಿಗೆ ರೂ.100.00 ಲಕ್ಷಗಳನ್ನು ಮೀಸಲಿರಿಸಿದೆ.

ಮೇಲೆ ಓದಲಾದ ಕ್ರ.ಸಂ.(2) ರಲ್ಲಿರುವ ಸರ್ಕಾರದ ಆದೇಶದಲ್ಲಿ ಚಾಲೆಂಜ್ ಫಂಡ್ ಯೋಜನೆಯಡಿ ಸಲ್ಲಿಸುವ ಪ್ರಸ್ತಾವನೆಗಳನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ ಸರ್ಕಾರದ ಅಪರ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಆಸುಇ(ಆಸು) ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಪುನರ್ ರಚಿಸಿ, ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ.(3) ರಲ್ಲಿರುವ ಸರ್ಕಾರದ ಆದೇಶದಲ್ಲಿ ಚಾಲೆಂಜ್ ಫಂಡ್ ಯೋಜನೆಯಡಿ ಸಲ್ಲಿಸುವ ಪ್ರಸ್ತಾವನೆಗಳನ್ನು ಪರಿಣಾಮಕಾರಿಯಾಗಿ ಆಯ್ಕೆ ಮಾಡುವ ಸಂಬಂಧ ಖಾಸಗಿ ರಂಗದಲ್ಲಿರುವ ವಿಷಯ ತಜ್ಞರ ಅನುಭವವನ್ನು ಪಡೆಯುವ ಸಲುವಾಗಿ ಇಬ್ಬರು ಖಾಸಗಿ ತಜ್ಞರನ್ನು ಒಳಗೊಂಡಂತೆ ಚಾಲೆಂಜ್ ಫಂಡ್ ಯೋಜನೆಯ ಆಯ್ಕೆ ಸಮಿತಿಯನ್ನು ಪುನರ್ ರಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ.(4) ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುವ ಪಂಚಾಯತ್ ರಾಜ್ ಆಯುಕ್ತಾಲಯವು ಒಳಚರಂಡಿ ಮತ್ತು septic tank ಶುದ್ಧೀಕರಣದ ವೇಳೆ ವಿಷ ಅನಿಲ ಸೇವಿಸಿ ಪೌರ ಕಾರ್ಮಿಕರು ಮರಣ ಹೊಂದುವುದನ್ನು ತಡೆಗಟ್ಟಲು ಕೇರಳ ಮೂಲದ Genrobotics ರವರು ಅಭಿವೃದ್ಧಿ ಪಡಿಸಿರುವ Bandicoot – Robotic Scavengers 04 ಕಂದಾಯ ವಿಭಾಗಗಳಲ್ಲಿ ಪ್ರತಿ ಕಂದಾಯ ವಿಭಾಗಕ್ಕೆ 02 ರಂತೆ ಒಟ್ಟು 8 Robotic Scavengers ಯಂತ್ರಗಳನ್ನು ಖರೀದಿಸಲು ತಲಾ ರೂ.39,52,568-00 ರಂತೆ ಒಟ್ಟು ರೂ.3,16,20,544-00 ಗಳ ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ(ಆಸು) 111 ಇಆಸು 2023**
**ಬೆಂಗಳೂರು, ದಿನಾಂಕ: 04-01-2024.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳನ್ನು ಸರ್ಕಾರದ ಇಲಾಖೆಗಳು ಹಾಗೂ ಸಂಸ್ಥೆಗಳಲ್ಲಿ ಜಾರಿಗೆ ತರುವ ಸಲುವಾಗಿ ಸರ್ಕಾರದ ಅಧಿಕಾರಿ/ಸಿಬ್ಬಂದಿ/ ಸರ್ಕಾರದ ಅಧಿಕಾರಿಗಳು/ ಸಿಬ್ಬಂದಿಗಳ ಗುಂಪು ಮತ್ತು ಸರ್ಕಾರದ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವ ಸಲುವಾಗಿ ಚಾಲೆಂಜ್ ಫಂಡ್ ಯೋಜನೆಯನ್ನು ಸ್ಥಾಪಿಸಲಾಗಿದೆ. 2023-24ನೇ ಸಾಲಿಗೆ ಚಾಲೆಂಜ್ ಫಂಡ್ ಯೋಜನೆಯಡಿಯಲ್ಲಿ ಕೆಳಕಂಡ 03 ಯೋಜನೆಗಳಿಗೆ ಷರತ್ತಿಗೊಳಪಟ್ಟು ಮೊದಲ ಹಂತದ ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

| ಕ್ರ. ಸಂ. | ವಿವರ | ಬಿಡುಗಡೆ ಮಾಡುವ ಅನುದಾನ ಮೊತ್ತ (ರೂ.ಗಳಲ್ಲಿ) |
|---|---|---|
| 1 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ – 02 Robotic Scavengers ಯಂತ್ರಗಳನ್ನು ಖರೀದಿಸಲು (ಒಂದು ಯಂತ್ರಕ್ಕೆ ರೂ.39,52,568 ರಂತೆ) | 79,05,136-00 |
| 2 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಮಂಡ್ಯ – ಹೊರಾಂಗಣ ವಿಜ್ಞಾನ ಉದ್ಯಾನ ಸ್ಥಾಪನೆಗೆ, | 10,00,000-00 |
| 3 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಮಂಡ್ಯ – ಖಗೋಳ ವಿಜ್ಞಾನ ಪ್ರಯೋಗಾಲಯ ಸ್ಥಾಪನೆಗೆ, | 10,00,000-00 |
| | **ಒಟ್ಟು** | **99,05,136-00** |

**(ಒಟ್ಟು ತೊಂಭತ್ತೊಂಭತ್ತು ಲಕ್ಷದ ಐದು ಸಾವಿರದ ನೂರಾ ಮೂವತ್ತಾರು ರೂಪಾಯಿಗಳು ಮಾತ್ರ)**

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2052-00-090-0-25-(ಯೋಜನೇತರ) ಆಡಳಿತಾತ್ಮಕ ಸುಧಾರಣಾ ಚಾಲೆಂಜ್ ಫಂಡ್ 059- ಇತರೆ ಖರ್ಚುಗಳು ಅಡಿಯಲ್ಲಿ ಭರಿಸತಕ್ಕದ್ದು".

ಯೋಜನೆ ನಿರ್ವಹಿಸುವ ಅಧಿಕಾರಿಯು ನಿಗಧಿತ ಅವಧಿಯಲ್ಲಿ ಯೋಜನೆಯನ್ನು ಸಮರ್ಪಕವಾಗಿ ನಿರ್ವಹಿಸಿ ಅನುದಾನ ಬಳಕೆಯ ಪ್ರಮಾಣ ಪತ್ರವನ್ನು ಸಕಾಲದಲ್ಲಿ ತಪ್ಪದೇ ಒದಗಿಸುವುದು. ತಪ್ಪಿದಲ್ಲಿ ಬಿಡುಗಡೆಯಾದ ಅನುದಾನವನ್ನು ಆಕರಣೆಯಾದ ಬಡ್ಡಿ ಸಮೇತ ಸರ್ಕಾರಕ್ಕೆ ಹಿಂದಿರುಗಿಸತಕ್ಕದ್ದು.

ಯೋಜನೆಯ ಪುನರಾವರ್ತಿತ ಖರ್ಚುಗಳನ್ನು ತಮ್ಮದೇ ಸಂಪನ್ಮೂಲದಿಂದ ಅಥವಾ ಸರ್ಕಾರದ ಆಯವ್ಯಯ ಒದಗಿಸಿರುವ ಅನುದಾನ ಮಿತಿಯೊಳಗೆ ಭರಿಸತಕ್ಕದ್ದು.

ಯೋಜನೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ (ಕೆ.ಟಿ.ಪಿ.ಪಿ.) ರನ್ವಯ ಕಾರ್ಯ ನಿರ್ವಹಿಸುವಂತೆ ಆದೇಶಿಸಿದೆ. ಯೋಜನೆ ಪೂರೈಸಿದ ನಂತರ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಮೌಲ್ಯಮಾಪನ ಮಾಡಿಸತಕ್ಕದ್ದು.